ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **1690 / 2023**

| | | |
|---|---|---|
| ಸಾಕ್ಷಿಯ ಹೆಸರಃ | ಡಾ. ನಿಖೀಲ್ ಪಾಟೀಲ | ಪ್ರಾಸಾಃ 09 |
| ತಂದೆ ಹೆಸರುಃ | ವೆಂಕನಗೌಡ | ಚಾಸಾಃ 10 |
| ವಯಸ್ಸುಃ | 28 ವರ್ಷ | ದಿಃ 25-07-2026 |
| ಉದ್ಯೋಗಃ | ಕಿರಿಯ ವೈದ್ಯಾಧಿಕಾರಿಗಳು ಎಸ್ ಡಿ ಎಮ್ ಧಾರವಾಡ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಧಾರವಾಡ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನಾನು ಜೂನ್ 2022 ರಿಂದ 2023 ರವರೆಗೆ ಸೈದಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 29.12.2022 ರಂದು ಸಂಜೆ 05.30 ಗಂಟೆಗೆ ಚಾಸಾಃ 1 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗೆ ಬಂದಿದ್ದು ನಾನು ಸದರಿಯವರನ್ನು 10 ನಿಮಿಷಗಳ ಕಾಲ ಪರಿಕ್ಷೆ ಮಾಡಿ ಅವರಿಗೆ ಎಡಗೈ ಹೆಬ್ಬೆರಳಿಗೆ ಕಚ್ಚಿದ ಗಾಯ ಮತ್ತು ಬಲಗೈ ಮೊಣಕೈ ಕೆಳಗೆ ತೆರಚಿದ ಗಾಯ ಆಗಿರುತ್ತದೆ. ಸದರಿಯವರನ್ನು ಚಿಕಿತ್ಸೆಗೆ ಒಳಪಡಿಸಿ ವೈದ್ಯಕೀಯ ಉಪಚಾರ ನೀಡಿರುತ್ತೇನೆ. ಹಲ್ಲೆ ಹಿನ್ನಲೆಯಲ್ಲಿ ಸದರಿ ಗಾಯಗಳು ಆಗಿದ್ದರಿಂದ ಎಮ್ ಎಲ್ ಸಿ ನೊಂದಣಿ ಮಾಡಿರುತ್ತೇನೆ. ಸದರಿ ಗಾಯಗಳು ಸಾಧಾ ಸ್ವರೂಪದ ಗಾಯಗಳು ಆಗಿರುತ್ತವೆ. ಸದರಿ ಗಾಯ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ10 ಸಾಕ್ಷಿಯ ಸಹಿಯನ್ನು ನಿಪಿ10(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎನ್ ಸಿ ವೈ ವಕೀಲರಿಂದಃ

ಚಾಸಾ1 ರವರು ಆಸ್ಪತ್ರೆಗೆ ಒಬ್ಬರೇ ಬಂದಿದ್ದರು. ನಾನು ನೀಡಿದ ಗಾಯದ ಪ್ರಮಾಣ ಪತ್ರದಲ್ಲಿ ಯಾವುದೇ ಎಮ್ ಎಲ್ ಸಿ ನಂಬರ್ ಇಲ್ಲ ಎಂದರೆ ಸರಿ. ನಾನು ಗಾಯದ ಪ್ರಮಾಣ ಪತ್ರಗಳಲ್ಲಿ ಗಾಯದ ವಯಸ್ಸು ಮತ್ತು ಬಣ್ಣ (Age of injury) ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಗಾಯಗಳ ಅಳತೆ ನಮೂದು ಮಾಡಿಲ್ಲ ಎಂದರೆ ಸರಿ. ಗಾಯದ ಪ್ರಮಾಣ ಪತ್ರದಲ್ಲಿ ಒಂದನೇ ಗಾಯದ ನಮೂದು ಮಾಡಿದ್ದರಲ್ಲಿ ರಕ್ತದ ಗಾಯ ಅಂತಾ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸಾಮಾನ್ಯ ಸ್ವರೂಪದ ಗಾಯ ಆಗಿದ್ದರಿಂದ ರಕ್ತದ ಗಾಯ ಅಂತಾ ನಮೂದು ಮಾಡಿಲ್ಲ. ಗಟ್ಟಿಯಾದ ಸ್ಥಳದ ಮೇಲೆ ಬಿದ್ದಾಗ ಇಂತಹ ಗಾಯಗಳು ಆಗಬಹುದು ಎಂದರೆ ಸರಿ. ಗಾಯದ ಪ್ರಮಾಣ ಪತ್ರದಲ್ಲಿ ಹೇಳಿದ ಒಂದನೇ ಗಾಯದ ಮಾಳೆ ಹೊಡೆಯುವ ಸಂದರ್ಬದಲ್ಲಿಯೂ ಕೂಡ ಆಗಬಹುದು ಎಂದರೆ ಸರಿಯಲ್ಲ. ಗಾಯಳನ್ನು ಚಿಕಿತ್ಸೆಗೆ ಒಳಪಡೆಸದೆ ಪೋಲಿಸರ ಹೇಳಿಕೆಯ ಮೇರೆಗೆ ಈ ಪ್ರಕರಣಕ್ಕೆ

ಅನೂಕೂಲವಾಗುವಂತೆ ಸುಳ್ಳು ಪ್ರಮಾಣ ಪತ್ರವನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆ. ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ